ದಿವಂಗತರಾದ ಶ್ರೀ ರಾಜ ಅಮರಪ್ಪ ನಾಯಕರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಶ್ರೀ ಬಂಡೆಪ್ಪ ಕಾಶಂಪೂರ್: ಸಹಕಾರ ಸಚಿವರು ನಿನ್ನೆ ಉತ್ತರ ಕೊಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು: ಮೊದಲು question hour ಆಗಲಿ. ನಂತರ ಶೂನ್ಯ ವೇಳೆಯಲ್ಲಿ ತೆಗೆದುಕೊಳ್ಳಬಹುದು.

2. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ರೈತರಿಗೆ ಬೆಂಬಲ ಬೆಲೆ ಒದಗಿಸುವ ಬಗ್ಗೆ

16(294) ಶ್ರೀ ಜಯಚಂದ್ರ ಟಿ.ಟಿ. (ಶಿರಾ)
ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿಮಾರುಕಟ್ಟೆ ಸಚಿವರು)

1. ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ದಲ್ಲಾಳಿಗಳು ರೈತರಿಂದ ಮತ್ತು ಖರೀದಿದಾರರಿಂದ ಕಮಿಷನ್ ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 78ರಡಿಯಲ್ಲಿ ಮಾರಾಟ ಮೌಲ್ಯದ ಮೇಲೆ ಹಣ್ಣು, ತರಕಾರಿ ಹಾಗೂ ಹೂವು ಉತ್ಪನ್ನಗಳಿಗೆ ಶೇ.5ಕ್ಕೆ ಮೀರದಂತೆ ಹಾಗೂ ಇತರೆ ಕೃಷಿ ಉತ್ಪನ್ನಗಳಿಗೆ ಶೇ.2ಕ್ಕೆ ಮೀರದಂತೆ ಖರೀದಿದಾರರಿಂದ ಕಮಿಷನ್ ಪಡೆಯಲು ಅವಕಾಶವಿರುತ್ತದೆ. ರೈತರಿಂದ ಯಾವುದೇ ರೀತಿಯ ಕಮಿಷನ್ ಪಡೆಯಲು ಅವಕಾಶವಿರುವುದಿಲ್ಲ.

ಖರೀದಿದಾರರಿಂದ ನಿಯಮಾನುಸಾರ ಕಮಿಷನ್ ತೆಗೆದುಕೊಳ್ಳುವುದು ಸರ್ಕಾರದ ಗಮನದಲ್ಲಿದೆ. ರೈತರಿಂದ ಕಮಿಷನ್ ತೆಗೆದುಕೊಳ್ಳುವುದು ಕೆಲವು ಪ್ರಕರಣಗಳಲ್ಲಿ ಈ ಹಿಂದೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

2. ಹಾಗಿದ್ದಲ್ಲಿ, ಅಂತಹವರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ;

ಪ್ರಕರಣಗಳನ್ನು ಆಧರಿಸಿ ನಿಯಮಾನುಸಾರ ಕಾಲಕಾಲಕ್ಕೆ ಕ್ರಮ ಕೈಗೊಳ್ಳಲಾಗಿದೆ.

3. ಮಾರುಕಟ್ಟೆಗೆ ಹೆಚ್ಚು ಜನ ಖರೀದಿದಾರರು ಬರದೆ ಸ್ಥಳೀಯ ಖರೀದಿದಾರರು ಮಾತ್ರ ಖರೀದಿಯಲ್ಲಿ ಭಾಗವಹಿಸುತ್ತಿರುವುದರಿಂದ ರೈತರಿಗೆ ನ್ಯಾಯಯುತ ಬೆಲೆ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಮಾರುಕಟ್ಟೆಗಳಲ್ಲಿ ನಿಯಮಾನುಸಾರ ಲೈಸನ್ಸ್ ಪಡೆದ ಖರೀದಿದಾರರಿಗೆ ಮಾತ್ರ ಖರೀದಿಯಲ್ಲಿ ಭಾಗವಹಿಸುವ ಅವಕಾಶ ಇರುತ್ತದೆ. ಸ್ಥಳೀಯರಾಗಲಿ ಅಥವಾ ಬೇರೆ ಸ್ಥಳದವರಾಗಲಿ ನಿಯಮಾನುಸಾರ ಲೈಸನ್ಸ್ ಪಡೆದು ಮಾರುಕಟ್ಟೆಯಲ್ಲಿ ನಡೆಯುವ ಖರೀದಿಯಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ.

4. ಉತ್ತಮ ಬೆಲೆ ಸಿಗಲು ಖರೀದಿದಾರರು ಮತ್ತು ದಲ್ಲಾಳಿಗಳಿಗೆ ನಿಯಮಾವಳಿಗಳನ್ನು ರೂಪಿಸಿ ರೈತರಿಗೆ ನ್ಯಾಯಯುತವಾದ ಬೆಲೆ ಸಿಗುವಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟಕ್ಕಾಗಿ ಯಾವುದೇ ಮಾರುಕಟ್ಟೆ ಕೊಂಡ್ಯೊಯಲು ಸ್ವತಂತ್ರರಿರುತ್ತಾರೆ. ಮಾರುಕಟ್ಟೆಯಲ್ಲಿ ಬೆಲೆ ನಿರ್ಧರಿಸುವ ಅಧಿಕಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಕಾಯ್ದೆಯಡಿಯಲ್ಲಿ ಇರುವುದಿಲ್ಲ. ಮಾರುಕಟ್ಟೆಗಳಲ್ಲಿನ ವಿದ್ಯಮಾನಗಳು ಬೆಲೆ ನಿಗಧಿಯಲ್ಲಿ ಪಾತ್ರ ವಹಿಸುತ್ತವೆ.

ಸ್ಪರ್ಧಾತ್ಮಕ ಧಾರಣೆ ದೊರೆಯಲು ಮಾರುಕಟ್ಟೆ ಪ್ರಾಂಗಣಗಳಲ್ಲಿ ಟೆಂಡರ್, ಬಹಿರಂಗ ಹರಾಜು ಮತ್ತು ಪರಸ್ಪರ ಒಪ್ಪಂದಗಳ ಮೂಲಕ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಅವಕಾಶವಿದೆ.

ಪ್ರಸ್ತುತ ಇರುವ ಮಾರುಕಟ್ಟೆಗಳ ಜೊತೆಗೆ ಖಾಸಗಿಯವರು ಮಾರುಕಟ್ಟೆಗಳ ಜೊತೆಗೆ ಖಾಸಗಿಯವರು ಮಾರುಕಟ್ಟೆಗಳ ಸ್ಥಾಪನೆ, ನೇರ ಖರೀದಿ ಕೇಂದ್ರ ಸ್ಥಾಪನೆ, ಒಪ್ಪಂದ ಕೃಷಿ, ಸ್ಪಾಟ್ ಎಕ್ಸ್‌ಚೇಂಜ್‌ಗಳ ಸ್ಥಾಪನೆ, ಒಂದು ಮಾರುಕಟ್ಟೆಯಲ್ಲಿ ವರ್ತಕರ ಲೈಸೆನ್ಸ್ ಹೊಂದಿರುವವರು ರಾಜ್ಯದ ಇತರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ವ್ಯವಹರಿಸಲು ಲೈಸೆನ್ಸ್ ಪಡೆಯಲು ಕಾಯ್ದೆಯಲ್ಲಿ ಅವಕಾಶವಿದೆ. ಇದರಿಂದ ರೈತರಿಗೆ ಸ್ಪರ್ಧಾತ್ಮಕ ಧಾರಣೆ ದೊರೆಯುವ ಅವಕಾಶಗಳು ಹೆಚ್ಚಿರುತ್ತದೆ.

ಶ್ರೀ ಟಿ.ಬಿ.ಜಯಚಂದ್ರ: ಇದೊಂದು ಬಹಳ ಪ್ರಾಮುಖ್ಯವಾದ ಪ್ರಶ್ನೆಯಾಗಿದೆ. ತಾವು ಹೇಗೆ ಉತ್ತರವನ್ನು ಕೊಟ್ಟಿದ್ದೀರಿ ಎನ್ನುವುದನ್ನು ನಾನು ನೋಡಿದ್ದೇನೆ. ನಾನು ಮೂಲತ: ಒಂದು ಮಾತು ಹೇಳಬೇಕು. ತಾವೂ ಕೂಡ ರೈತ ಕುಟುಂಬದಿಂದ ಬಂದಿರುವವರು. ಬೆಂಗಳೂರಿನ ಯಶವಂತಪುರ ಬಿಟ್ಟರೆ ದೊಡ್ಡ ಮಾರುಕಟ್ಟೆ ನಿಮ್ಮ ಊರಿನಲ್ಲಿದೆ. ನಿಮಗೆ ಗೊತ್ತಿಲ್ಲವೆನ್ನುವ ಮಾತನ್ನು ಹೇಳುತ್ತಿಲ್ಲ. ಆದರೆ, ಸತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ರೈತರಿಂದ ದಲ್ಲಾಳಿಗಳು 4% commission ಅನ್ನು ಚೀಟಿಗಳಲ್ಲಿ ವಸೂಲಿ ಮಾಡುವುದಿದೆ. ಅದು ರಾಜ್ಯ ವ್ಯಾಪ್ತಿ ಇದೆ. ಆ ಬಗ್ಗೆ

ಕಾನೂನಿನ ನಿಷೇಧವಿದ್ದರೂ ಅದನ್ನು ತಪ್ಪಿಸಲಿಕ್ಕೆ ಸಾಧ್ಯವಾಗಿಲ್ಲ. ಕೆಲವು ನಮ್ಮ ಗಮನಕ್ಕೆ ಬಂದಿದೆ ಎನ್ನುವುದನ್ನು ತಾವೇ ಒಪ್ಪಿಕೊಂಡಿದ್ದೀರಿ ಪ್ರರಕರಣಗಳನ್ನು ಆಧರಿಸಿ ನಿಯಮಾನುಸಾರ ಕಾಲಕಾಲಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಉತ್ತರಿಸಿದ್ದೀರಿ. ಏನು ಕ್ರಮ ಕೈಗೊಂಡಿದ್ದೀರಿ ಎಂದು ನೇರವಾಗಿ ಪ್ರಶ್ನೆ ಕೇಳುತ್ತೇನೆ. ತಾಲ್ಲೂಕಿಗೆ ಒಂದು ಮಾರುಕಟ್ಟೆ ಇರುತ್ತದೆ ಅಥವಾ ಎರಡು ತಾಲ್ಲೂಕುಗಳಿಗೆ ಒಂದು ಮಾರುಕಟ್ಟೆ ಇರುತ್ತದೆ. Licence ಇರುತ್ತದೆ, ಅವರಿಗೆ freedom ಇದ್ದರೂ ಹೆಚ್ಚು ಜನ ಖರೀದಿದಾರರು ಬರುವುದಕ್ಕೆ ಆಗುವುದಿಲ್ಲ. ಅದಕ್ಕೆ ಕಾರಣವೇನೆಂದರೆ ಸ್ಥಳೀಯವಾಗಿರುವ ಖರೀದಿದಾರರು ಅಲ್ಲಿಗೆ ಬೇರೆಯವರು ಬರುವುದಕ್ಕೆ ಬಿಡುವುದಿಲ್ಲ. ಅಂಥ ಸಂದರ್ಭದಲ್ಲಿ ನಿಮ್ಮ ಕಾರ್ಯದರ್ಶಿಯವರು ಏನು ಕೆಲಸ ಮಾಡುತ್ತಾರೆ? ನಾವು ಅವರನ್ನು ಕರೆದಿದ್ದೇವೆ, ಇವರನ್ನು ಕರೆದಿದ್ದೇವೆಂದು ಅವರು ಹೇಳುತ್ತಾರೆ. ಆದರೆ, ಖಂಡಿತವಾಗಿಯೂ ಕರೆಸುವುದಿಲ್ಲ. ಉದಾಹರಣೆಗೆ, ಶಿರಾದಲ್ಲಿಯೇ 4 ಜನ mill owners ಇದ್ದಾರೆ. ಅವರನ್ನು ಬಿಟ್ಟರೆ ಬೇರೆ ಯಾರನ್ನೂ ಬರುವುದಕ್ಕೆ ಬಿಡುವುದಿಲ್ಲ. ದಾವಣಗೆರೆಯಿಂದ ಖರೀದಿದಾರರು ಅಲ್ಲಿಗೆ ಬಂದರೆ ಅವರನ್ನು ವಾಪಸ್ಸು ಓಡಿಸುತ್ತಾರೆ. ನೀವು ಬತ್ತಕ್ಕೆ ಕೊಡುತ್ತೀರುವ ಬೆಂಬಲ ಬೆಲೆ 854 ರೂ. ಇದೆ. ಆದರೆ, 600 ರಿಂದ 700 ರೂ.ಗಿಂತ ಮೇಲೆ ಬತ್ತ ಖರೀದಿ ಆಗುತ್ತಿಲ್ಲ. ಸೋನಾ ಮಸೂರಿ ಅಕ್ಕಿ ಮಾತ್ರ 1,000 ರಿಂದ 1100 ರೂ. ಗಳಿಗೆ ಹೋಗುವುದನ್ನು ಬಿಟ್ಟರೆ ಬೇರೆ ಬತ್ತ ಅಷ್ಟು ಬೆಲೆಗೆ ಹೋಗುತ್ತಿಲ್ಲ. ಇದು ನಿಮಗೂ ಗೊತ್ತಿರುವ ವಿಚಾರವಾಗಿದೆ. ಸರ್ಕಾರದವರು ಈ ಬಗ್ಗೆ ಯಾವ ರೀತಿ action ತೆಗೆದುಕೊಳ್ಳುತ್ತದೆ ಎನ್ನುವ ಸ್ಪಷ್ಟ message ಜನರಿಗೆ ಹೋಗಬೇಕಾಗುತ್ತದೆ. competition ಅನ್ನು create ಮಾಡುವುದಕ್ಕೋಸ್ಕರ ಮಾರುಕಟ್ಟೆ ಪ್ರಾಂಗಣಕ್ಕೆ ಹೆಚ್ಚು ಜನ ಖರೀದಿದಾರರು ಬರುವ ರೀತಿಯಲ್ಲಿ rules ಮಾಡಿ ಎಂದು ಹೇಳಿದರೆ ಅವಕಾಶ ಇಲ್ಲವೆಂದು ಹೇಳುತ್ತೀರಿ. ಅವಕಾಶ ಬೇಕೆನ್ನುವುದಾದರೆ ನಾವೆಲ್ಲರೂ ಒಪ್ಪುತ್ತೇವೆ, ಅದಕ್ಕೊಂದು amendment ಮಾಡಿ. ಯಾರು ಬೇಡವೆನ್ನುತ್ತಾರೆ? ಆದರೆ, ಹೆಚ್ಚು ಜನ ಖರೀದಿದಾರರು ಬಂದರೆ ನ್ಯಾಯಯುತವಾದ ಬೆಲೆ ಕೊಡುವ ರೀತಿಯಲ್ಲಿ ಆಗುವುದಕ್ಕೋಸ್ಕರ ಸರ್ಕಾರದ ಕಾಯಕ್ರಮ ಅಥವಾ ಚಿಂತನೆ ಏನಾದರೂ ಇದೆಯೇ?

ಶ್ರೀ ಶಿವರಾಜ್ ಎಸ್. ತಂಗಡಗಿ: ನಮ್ಮ ನಿಯಮಾನುಸಾರ ಕ್ರಮಗಳನ್ನು ಕೈಗೊಂಡ ಬಗ್ಗೆ ಮಾನ್ಯ ಹಿರಿಯ ಸದಸ್ಯರು ಪ್ರಶ್ನೆ ಕೇಳಿದ್ದರು. ಈಗಾಗಲೇ 165 ಪ್ರಕರಣಗಳಲ್ಲಿ ವಿಷಯ ಸಂಗ್ರಹಣ ಮಾಡಿದಾಗ ಒಂದು ಪ್ರಕರಣ ಮಾತ್ರ ನಮಗೆ ಸಿಕ್ಕಿದೆ. ಆ ಪ್ರಕರಣದಲ್ಲಿ ಈಗ ಕ್ರಮ ತೆಗೆದುಕೊಳ್ಳುವ ಹಂತದಲ್ಲಿದ್ದೇವೆ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ, ತಾವು ಬತ್ತದ ಬೆಲೆ ನಿಗದಿ ಪಡಿಸುವ ಬಗ್ಗೆ ಕೇಳಿದ್ದೀರಿ. ಬತ್ತದ ಬೆಲೆ ನಿಗದಿ ಮಾಡುವ ಪದ್ಧತಿ ನಮ್ಮದಲ್ಲ.

ಅದನ್ನು ಕೇಂದ್ರ ಸರ್ಕಾರ ನಿಗದಿಪಡಿಸಬೇಕು. ಆದ್ದರಿಂದ, ಮುಂದಿನ ದಿನಗಳಲ್ಲಿ ಮಾರುಕಟ್ಟೆಗೆ ಖರೀದಿದಾರರನ್ನು ಕ್ರೋಢೀಕರಿಸಬೇಕು, ಅವರನ್ನು ಸೇರಿಸಿ ಬೆಂಬಲ ಬೆಲೆ ಹೆಚ್ಚು ಬರುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ತಾವೇನು ಹೇಳಿದಿರಿ, ಅದರ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಕಾಯ್ದೆಗೆ ತಿದ್ದುಪಡಿ ತಂದು ಅದರ ಬಗ್ಗೆ ಚರ್ಚಿಸಿ ಮುಂದಿನ ಪರಿಶೀಲನೆ ಮಾಡುತ್ತೇನೆಂಬ ಮಾತನ್ನು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಈಗ ತೂಕದಲ್ಲಿ ಮೋಸವಾಗುತ್ತಿದೆ. ಒಂದು ಕ್ವಿಂಟಾಲ್ ಬತ್ತ ಮಾರುಕಟ್ಟೆಗೆ ಬಂದರೆ ಎರಡು ಕೆ.ಜಿ. ಬತ್ತವನ್ನು ನಿಚ್ಚಳವಾಗಿ ಅವನಿಗೆ ಲಾಭವಾಗಿ ಕೊಡಬೇಕು, ಚೀಲದ ತೂಕವೆಂದು ಒಂದು ಕೆ.ಜಿ. ಹೋಗುತ್ತದೆ. ಈಗ ಚೀಲದ ಬದಲು ಪ್ಲಾಸ್ಟಿಕ್ ಚೀಲ ಮಾಡಿದ್ದಾರೆ, ಅದು ಅರ್ಧ ಕೆ.ಜಿ. ತೂಕ ಮಾತ್ರ ಬರುತ್ತದೆ. ಆದರೆ, ಅದಕ್ಕೆ ಒಂದು ಕೆ.ಜಿ. ತೂಕವೆಂದು ವಸೂಲಿ ಮಾಡುತ್ತಾರೆ. ಹಮಾಲರಿಗೆ ಎಂದು ಒಂದು ಕೆ.ಜಿ. ತೆಗೆಯುತ್ತಾರೆ. ಕಸ ಗುಡಿಸುವವರಿಗೆಂದು ಒಂದು ಕೆ.ಜಿ. ಎಂದು ತೆಗೆಯುತ್ತಾರೆ. ಒಂದು ಕ್ವಿಂಟಾಲ್ ಬತ್ತದಲ್ಲಿ 5 ಕೆ.ಜಿ. shortage ತರುತ್ತಿದ್ದಾರೆ. ನೀವೇನಾದರೂ ಮಾಡಿ computer weighing machine ಹಾಕಬೇಕೆಂದಿದೆ. ಇದು ಯಾವ ಮಾರುಕಟ್ಟೆಯಲ್ಲಿ ಇದೆ? ಇವತ್ತು ನೀವು ಅಳವಡಿಸಿ ನೋಡಿ ನಂತರದ 8 ದಿವಸಗಳಲ್ಲಿ ಅದನ್ನು ಉದ್ದೇಶಪೂರ್ವಕವಾಗಿ ಕೆಡಿಸಿ ಇಟ್ಟಿರುತ್ತಾರೆ. ನಮ್ಮ ಕಡೆ ಚಿಂತಾಲು ಎಂದು ಹೇಳುತ್ತಾರೆ. ಅದೇ ಚಿಂತಾಲುಗಳನ್ನು ಹಾಕಿಕೊಂಡು ಇವತ್ತು ತೂಕ ಮಾಡುತ್ತಿದ್ದಾರೆ. ಹಾಗಾಗಿ, ತೂಕದಲ್ಲಿ ಮೋಸವಾಗುತ್ತಿದೆ. ಅದರಲ್ಲಿಯೂ ಕಂಡ ಹಾಗೆಯೇ 4–5 ಕೆ.ಜಿ. ಕಳೆದರೆ ರೈತರು ಹೇಗೆ ಉದ್ಧಾರವಾಗುವುದಕ್ಕೆ ಸಾಧ್ಯ? ಇದಕ್ಕೆ ಏನಾದರೊಂದು action ಮಾಡುವುದಕ್ಕಾಗುತ್ತದೆಯೇ? ಇದು ನಿಮ್ಮ ಕೈಯಲ್ಲಿಯೇ ಇದೆ.

ಶ್ರೀ ಶಿವರಾಜ್ ಎಸ್. ತಂಗಡಗಿ: ತೂಕದ ವಿಷಯದಲ್ಲಿ ಮಾನ್ಯ ಹಿರಿಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ನನ್ನ ಇಲಾಖೆ ಮುಂದಿನ ಆಗಸ್ಟ್‌ನಿಂದ ಒಂದು ಯೋಜನೆಯನ್ನು ಪ್ರಾರಂಭ ಮಾಡುತ್ತಿದೆ. ಇಡೀ ಎಪಿಎಂಸಿಯಲ್ಲಿ ಪ್ರತಿ ಖರೀದಿದಾರರ ಹತ್ತಿರ computer weighing machine ಇಡಬೇಕೆಂದು ಇಲಾಖೆಯಲ್ಲಿ ನಿರ್ಧಾರ ತೆಗೆದುಕೊಂಡಿದೆ. ಮುಂದಿನ ದಿನಗಳಲ್ಲಿ ಆ ಕೆಲಸ ಮಾಡಲಿಕ್ಕೆ ಸಿದ್ಧರಿದ್ದೇವೆ. ಇಲಾಖೆಯಿಂದ ಈಗಾಗಲೇ ನಾವು ಕಾರ್ಯಕ್ರಮವನ್ನು ಅಳವಡಿಸಿಕೊಂಡಿದ್ದೇವೆ.

ಶ್ರೀ ಯು.ಟಿ. ಖಾದರ್: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಜನರು ಮುಖ್ಯ ಕೃಷಿಯಾದ ಅಡಿಕೆಯಿಂದ ಜೀವಿಸುತ್ತಿದ್ದಾರೆ. ಆದರೆ, ಒಂದು ತಿಂಗಳ ಅನಾವೃಷ್ಟಿ ಮತ್ತು ಅತಿವೃಷ್ಟಿಯಿಂದ ಸಂಪೂರ್ಣವಾಗಿ ಅಡಿಕೆ ಹಾಳಾಗಿದೆ. ಬಹಳಷ್ಟು ಹಿಂದೆ ಸಚಿವರು ಬಂದಿದ್ದಾಗ 65 ರೂ. ಕೊಡುತ್ತೇವೆಂದು ಹೇಳಿದರು, ರಾಜ್ಯ

ಅಧ್ಯಕ್ಷರು ಮತ್ತು ಸಂಸದರು 85 ರೂ. ಕೊಡಿಸುತ್ತೇನೆಂದು ಹೇಳಿದರು. ಇನ್ನೊಬ್ಬ ಸಂಸದರು ಬಂದು 75 ರೂ. ಕೊಡಿಸುತ್ತೇನೆಂದು ಹೇಳಿದರು. ಹೀಗೆ ಬೇರೆ ಬೇರೆ ರೀತಿಯ ಘೋಷಣೆ ಮಾಡಿ ಹೋಗಿದ್ದಾರೆ. ಆದಕಾರಣ, ನಾನು ಕಳಕಳಿಯಿಂದ ಕೇಳುತ್ತೇನೆ, ದಕ್ಷಿಣ ಕನ್ನಡ ಜಿಲ್ಲೆಯ ಜನರ ಮೇಲೆ ಪ್ರೀತಿ ಇಟ್ಟು ಕನಿಷ್ಟ 100 ರೂ.ಗಳ ಬೆಂಬಲ ಬೆಲೆಯನ್ನು ಅಡಿಕೆಗೆ ತಾವು ಕೊಡುವ ನಿರ್ಧಾರವನ್ನು ಅತಿ ಶೀಘ್ರದಲ್ಲಿ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಶ್ರೀ ಟಿ.ಬಿ. ಜಯಚಂದ್ರರವರು ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ರೈತರ ಮೇಲೆ ನಿರಂತರವಾಗಿ ಖರೀದಿದಾರರಿಂದ ಶೋಷಣೆಯಾಗುತ್ತಿದೆ. ಉದಾಹರಣೆಗೆ, ನಮ್ಮಲ್ಲಿ ತೆಂಗಿನಕಾಯಿ, ಸೂರ್ಯಕಾಂತಿ, ನೆಲಗಡಲೆಯನ್ನು ಬೆಳೆದು ಮಾರುತ್ತಾರೆ. ಅದಕ್ಕೆ ನೀವು ಏನಾದರೂ computerize ಮಾಡಿ ದಯವಿಟ್ಟು ಖರೀದಿದಾರರಿಂದ ರೈತರಿಗೆ ಏನು ಅನಾಹುತವಾಗುತ್ತಿದೆ, ಅನ್ಯಾಯವಾಗುತ್ತಿದೆ ಅದನ್ನು ಸರಿಪಡಿಸುವ ಪ್ರಯತ್ನ ನಿಮ್ಮಿಂದ ಆಗಬೇಕು. ಶಿರಾ, ಕಡೂರು ಎಪಿಎಂಸಿಗಳಲ್ಲಿ ಮಾತ್ರವಲ್ಲ ಬೀರೂರಿನಲ್ಲಿ ಅಡಿಕೆ ಮತ್ತು ಖಾದರ್‌ರವರು ಹೇಳಿದ ಹಾಗೆ CAMPCO ನಲ್ಲಿಯೂ ಕೂಡ ತೂಕದಲ್ಲಿ ಮೋಸವಾಗುತ್ತಿದೆ. ನನಗನ್ನಿಸುವುದೇನೆಂದರೆ, ಎಪಿಎಂಸಿ ಯಾರ್ಡ್‌ಗಳಲ್ಲಿ ತೂಕ ಮತ್ತು ಅಳತೆ ಮಾಡುವ ಅಧಿಕಾರಿಗಳನ್ನು ನೇಮಿಸಿ, ಆಗ ರೈತರಿಗೆ ನ್ಯಾಯ ಸಿಗುತ್ತದೆ. ರೈತರಿಗೆ ನಿಗದಿಯಾದ ಬೆಲೆ ಸಿಗುತ್ತಿಲ್ಲ. ಕಡೂರಿನಲ್ಲಿ 4 ಖರೀದಿದಾರರು ಮಾತ್ರ ಇದ್ದಾರೆ. ಬೇರೆ ಖರೀದಿದಾದರರೂ ಅಲ್ಲಿಗೆ ಬರುವ ಹಾಗೆ ಮಾಡಬೇಕು. ಈ ಬಗ್ಗೆ ಎಪಿಎಂಸಿ ಸಹ ನಿರ್ದೇಶಕರಿಗೆ ಆದೇಶ ನೀಡಬೇಕು. ಕಡೂರಿನಿಂದ ಬೆಂಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಪ್ರತಿ ದಿನ 4–5 ಲಕ್ಷ ರೂ.ಗಳ ತರಕಾರಿ ಸರಬರಾಜು ಆಗುತ್ತಿದೆ. ಕಡೂರಿನಲ್ಲಿ ತರಕಾರಿ ಮಾರುಕಟ್ಟೆ ಮಾಡಲಿಕ್ಕೆ ಅವಕಾಶ ಮಾಡಿ, ಆ ತರಕಾರಿ ಖರೀದಿದಾರರಿಗೆ ಲೈಸೆನ್ಸ್ ಕೊಡಿಸುವ ಕಾರ್ಯ ತಮ್ಮ ಇಲಾಖೆಯಿಂದ ಆಗಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್: ಇದು ಬಹಳ ಮಹತ್ವವಾದ ವಿಷಯ. ನಮ್ಮ ಭಾಗದಲ್ಲಿ ನಮ್ಮ ರೈತರು ಹೆಚ್ಚುಕಡಿಮೆ 80% food-grains ಬೆಳೆಯುತ್ತಾರೆ. ಈ ಕಡೆ ತೆಂಗು, ಅಡಿಕೆ ಮುಂತಾದವನ್ನು ಬೆಳೆಯುತ್ತಾರೆ. ನಮ್ಮ ಜನ ಯಾವ ರೀತಿ ಸಮಸ್ಯೆ face ಮಾಡುತ್ತಾರೆಂದರೆ ಕೆಲವು ಹಂತದಲ್ಲಿ ಮಾರುಕಟ್ಟೆಗೆ ಬಂದಾಗ ಅವರಿಗೆ ಕೆಲವು ಸಮಸ್ಯೆ ಇರುತ್ತದೆ. ಆದರೆ, ರೈತ ಯಾವ ರೀತಿ ದೊಡ್ಡ ದನಿ ಇದ್ದಾನೆಂದರೆ ಹೊಲದಲ್ಲಿ ಬೀಜ ಬಿತ್ತಿದ ಮೇಲೆ ತೆನೆ ಆದಮೇಲೆ ಹಕ್ಕಿ ತಿಂದು ಹೋಗುತ್ತವೆ, ರಾಶಿ ಹಾಕಿದ ಮೇಲೆ ಅಲ್ಲಿ ನಾಲ್ಕು ಜನರಿಗೆ ಕೊಡಬೇಕು, ನಂತರ ಮಾರುಕಟ್ಟೆಗೆ ಬಂದಮೇಲೆ especially ನಮ್ಮ ಗುಲಬರ್ಗಾ, ಬೀದರ್ ಭಾಗದಲ್ಲಿ ಬೆನ್ನಿ ಹೊಡೆಯುವ ಕೆಲಸವಿದೆ. clean ಮಾಡುವ ಪದ್ಧತಿಯನ್ನು market yard ನಿಂದ

ತೆಗೆದುಹಾಕಬೇಕು. major ಶೋಷಣೆ ಎಲ್ಲಿ ಆಗುತ್ತಿದೆ ಎಂದರೆ ರೈತ ಮೂಟೆಯನ್ನು ತೆಗೆದುಕೊಂಡು ಬಂದ ಮೇಲೆ ಮಾರುಕಟ್ಟೆಯಲ್ಲಿಯೇ complete clean ಮಾಡುತ್ತಾರೆ. ಆ clean ಮಾಡುವುದರಲ್ಲಿಯೇ ಒಂದು ಕೆ.ಜಿ. ಅನ್ನು ಹುಡುಗರು ತೆಗೆದುಕೊಂಡರು, ಒಂದು ಕೆ.ಜಿ.ಯನ್ನು ಚೆನ್ನಿ ಹೊಡೆಯುವವರು ತೆಗೆದುಕೊಳ್ಳುತ್ತಾರೆ ಮತ್ತು ಕೊನೆಗೆ ಮೂಟೆ ಹಾಕಿದ ಮೇಲೆ ವ್ಯಾಪಾರಸ್ಥರು ಬಂದು ಖರೀದಿ ಮಾಡುತ್ತಾರೆ. ಮಾರುಕಟ್ಟೆಯಲ್ಲಿ clean ಮಾಡುವ ವ್ಯವಸ್ಥೆಯನ್ನು ತೆಗೆದರೆ ಅವೆಲ್ಲ ಕಡಿಮೆ ಆಗುತ್ತದೆ. ಜೊತೆಗೆ computer ಅಳವಡಿಸುವುದು ಬಹಳ ಜರೂರು ಇದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ತಮಗೂ ಅನುಭವವಿದೆ. ಇಲ್ಲಿ Food Minister ಇದ್ದಾರೆ, ಮಾರುಕಟ್ಟೆ ಸಚಿವರು ಉತ್ತರಿಸುತ್ತಿದ್ದಾರೆ. ಈಗ ಸೋನಾ ಮಸೂರಿ ಅಕ್ಕಿಯ ಬೆ 38ರಿಂದ 40 ರೂ. ಇದೆ. ಆದರೆ, ಒಬ್ಬ ರೈತ ಮಾರುಕಟ್ಟೆಗೆ ಹೋದರೆ ಮೂಟೆಗೆ ಒಂದು ಸಾವಿರ ರೂ. ಮಾತ್ರ ಸಿಗುತ್ತದೆ. ಅಲ್ಲಿ ಎಷ್ಟು ಲಾಭ ಇಡಲಾಗುತ್ತದೆ ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳಬೇಕು. Demand and Supply ನೀತಿಗಳನ್ನು ಬಿಟ್ಟುಬಿಡಿ. mill owners ಎಷ್ಟು ಲಾಭ ಮಾಡುತ್ತಿದ್ದಾರೆ? ಅದರ ಮೇಲೆ ಏನಾದರೂ ನಿಯಂತ್ರಣವಿದೆಯೇ? ಗ್ರಾಹಕರಿಗೂ ಮತ್ತು ರೈತರಿಗೂ ಲಾಭವಾಗುತ್ತಿಲ್ಲವೆಂದು ಹೇಳಿದರೆ ವರ್ತಕರಿಗೆ ಲಾಭವಾಗುತ್ತಿರುವುದನ್ನು ನೋಡಿಕೊಂಡು ಕುಳಿತಿದ್ದೇವೆ. ಈ ಬಗ್ಗೆ ಪತ್ರಿಕೆಗಳಲ್ಲೂ ಸಾಕಷ್ಟು ಬರುತ್ತಿದೆ. ಏಕೆ ಈ ರೀತಿ ಆಗುತ್ತಿದೆ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಏನಾದರೂ ಒಂದು ಚಿಂತನೆ ಮಾಡುವುದಕ್ಕೆ ಸಾಧ್ಯವೇ? ಕೃಷಿ ಸಚಿವರು ಸಹ ಇಲ್ಲಿಯೇ ಇದ್ದಾರೆ. ಈ ಬೆಲೆಗಳಲ್ಲಿ ರೈತರು ಯಾರೂ ಕೂಡ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಏನು action ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ?

ಶ್ರೀ ಶಿವರಾಜ್ ಎಸ್. ತಂಗಡಗಿ: ಹಿರಿಯ ಸದಸ್ಯರಾದ ಕೃಷ್ಣಮೂರ್ತಿಯವರು ಒಂದು ಸಲಹೆ ಕೊಟ್ಟರು. ಈಗಾಗಲೇ 25 ಎಪಿಎಂಸಿಗಳಲ್ಲಿ e-tendering ಪದ್ಧತಿ ಪ್ರಾರಂಭ ಮಾಡಿದ್ದೇವೆ. ಈ ವರ್ಷವೂ 15 ಎಪಿಎಂಸಿಗಳಲ್ಲಿ computer ಅಳವಡಿಸಿ e-tendering ಪದ್ಧತಿಯನ್ನು ಪ್ರಾರಂಭಿಸುತ್ತಿದ್ದೇವೆ, ಖಾದರ್ ರವರು ಅಡಿಕೆ ಬೆಳೆ ಬಗ್ಗೆ ಹೇಳಿದರು. ಈಗಾಗಲೇ ನಾವು ಕೆಂಪು ಅಡಿಕೆಗೆ ಒಂದು ಕ್ವಿಂಟಾಲ್ 9500 ರೂ.ಗಳ ಬೆಂಬಲ ಬೆಲೆಯನ್ನು ನಿಗದಿಪಡಿಸಿದ್ದೇವೆ. ಬಿಳಿ ಅಡಿಕೆ ಬೆಂಬಲ ಬೆಲೆ ಈಗಾಗಲೇ ನಿಗದಿಯಾಗಿದೆ. ಅವರು extra 100 ರೂ. ಕೊಡಿ ಎಂದು ಕೇಳುತ್ತಿದ್ದಾರೆ. ಆ ಬಗ್ಗೆ ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡುವ ಕೆಲಸ ಮಾಡುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪೂರ್: cleaning system ನಲ್ಲಿ ರೈತರಿಗೆ ಮೋಸವಾಗುತ್ತಿದೆ. ಅವರು ತಮ್ಮ ಹತ್ತಿರ clean ಮಾಡಿಕೊಂಡು ಬಂದು ಪುನ: market yard ನಲ್ಲಿ complete clean ಮಾಡುತ್ತಾರೆ.

ಶ್ರೀ ಶಿವರಾಜ್ ಎಸ್. ತಂಗಡಗಿ: ಯಾವ ರೈತರೂ ಇವತ್ತಿನವರೆಗೂ ಅದರ ಬಗ್ಗೆ complaint ಕೊಟ್ಟಿಲ್ಲ. ಇವತ್ತು ಮಾನ್ಯ ಸದಸ್ಯರು ಆ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ. ಆ ಬಗ್ಗೆ ನಾನು ಅಧಿಕಾರಿಗಳ ಜೊತೆ ಚರ್ಚಿಸಿ ಪರಿಶೀಲನೆ ಮಾಡುತ್ತೇನೆ.

ಹಾಲು ಉತ್ಪಾದಕ ಸಹಕಾರ ಒಕ್ಕೂಟಗಳ ಲಾಭ/ನಷ್ಟದ ಬಗ್ಗೆ

12(155) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)
ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಸಹಕಾರ ಸಚಿವರು)

ಅ) ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ (ಕೆ.ಎಂ.ಎಫ್) ಅಧೀನದಲ್ಲಿ ಬರುವ ಜಿಲ್ಲಾ ಹಾಲು ಒಕ್ಕೂಟಗಳು ಪಶು ಆಹಾರ ತಯಾರಿಕಾ ಮತ್ತು ಇತರ ಘಟಕಗಳು ಯಾವುವು? (ಪೂರ್ಣ ವಿವರ ಒದಗಿಸುವುದು)

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ, ಬೆಂಗಳೂರು ಇದರ ಅಧೀನದಲ್ಲಿ ಒಟ್ಟು 13 ಜಿಲ್ಲಾ ಹಾಲು ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿವೆ. ಇದಲ್ಲದೆ, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳವು 4 ಪಶು ಆಹಾರ ಘಟಕಗಳನ್ನು ಹಾಗೂ 6 ಇತರೆ ಘಟಕಗಳನ್ನು ಹೊಂದಿದೆ.

ಆ) ಕೆ.ಎಂ.ಎಫ್. ಮತ್ತು ವಿವಿಧ ಹಾಲು ಒಕ್ಕೂಟಗಳು (ಪ್ರಾಡಕ್ಟ್ ಡೈರಿ ಹಾಗೂ ಇತರ ಘಟಕಗಳು ಸೇರಿದಂತೆ) ಕಳೆದ ಮೂರು ವರ್ಷಗಳಿಂದ ಗಳಿಸಿರುವ ಲಾಭ ಅಥವಾ ಅನುಭವಿಸಿರುವ ನಷ್ಟದ ಮೊತ್ತವೆಷ್ಟು? (ಜಿಲ್ಲಾವಾರು ವಿವರ ಒದಗಿಸುವುದು)

ಕೆ.ಎಂ.ಎಫ್ ಮತ್ತು ವಿವಿಧ ಹಾಲು ಒಕ್ಕೂಟಗಳು ಕಳೆದ ಮೂರು ವರ್ಷಗಳಿಂದ ಗಳಿಸಿರುವ ಲಾಭ, ಅಥವಾ ಅನುಭವಿಸಿರುವ ನಷ್ಟದ ಮೊತ್ತವನ್ನು ಅನುಬಂಧದಲ್ಲಿ ನೀಡಲಾಗಿದೆ.